# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಶಿರೂರು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಹನುಮವ್ವ ಗಂಡ ದುರುಗಪ್ಪ ಮ್ಯಾಗಳಕೇರಿ (ಮ್ಯಾಗಳಮನಿ) ಸಾ: ಅರಕೇರ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ ರಾಜ್ ಅಧಿನಿಯಮ 1993ರ ಪ್ರಕರಣ 43(ಎ)ಮತ್ತು 48(4)ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1) ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರ ಪತ್ರ ಸಂಖ್ಯೆ:ಕಂ/ಪ್ರಾಆಕ/ಜಿಪಂ/135/2018-19, ದಿನಾಂಕ: 08.07.2019.
2) ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರ ವಿಚಾರಣಾ ನೋಟಿಸ್‌ಗಳು, ದಿನಾಂಕ: ದಿನಾಂಕ: 21.05.2019, 30.05.2019 ಮತ್ತು 17.06.2019.
3) ಶ್ರೀಮತಿ ಹನುಮವ್ವ ಗಂಡ ದುರುಗಪ್ಪ ಮ್ಯಾಗಳಕೇರಿ( ಮ್ಯಾಗಳಮನಿ), ಸಾ: ಅರಕೇರ, ಶಿರೂರು ಗ್ರಾಮ ಪಂಚಾಯಿತಿ, ಯಲಬುರ್ಗಾ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರು ಕಾರಣ ಕೇಳುವ ನೋಟೀಸ್‌ಗೆ ಲಿಖಿತ ಹೇಳಿಕೆ, ದಿನಾಂಕ:06.05.2019.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿ ಶ್ರೀಮತಿ ಹನುಮವ್ವ ಗಂಡ ದುರುಗಪ್ಪ ಮ್ಯಾಗಳಕೇರಿ (ಮ್ಯಾಗಳಮನಿ) ಸಾ: ಅರಕೇರಾ, ಅಧ್ಯಕ್ಷರು, ಶಿರೂರು ಗ್ರಾಮ ಪಂಚಾಯಿತಿ, ಯಲಬುರ್ಗಾ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರು ತಾತ್ಕಾಲಿಕ ಅಧ್ಯಕ್ಷರಾದ ಅವಧಿಯಲ್ಲಿ ರೂ.2,05,700/-ಗಳನ್ನು ಶಿರೂರು ಗ್ರಾಮ ಪಂಚಾಯಿತಿಯ ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯೊಂದಿಗೆ ಶಾಮೀಲಾಗಿ ಸರ್ಕಾರದ ಹಣ ದುರುಪಯೋಗಪಡಿಸಿಕೊಂಡು ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವುದು ವಿಚಾರಣಾ ವರದಿಯಲ್ಲಿ ಮೇಲ್ನೋಟಕ್ಕೆ ಕಂಡುಬರುತ್ತದೆಂದು ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 43(ಎ) ಮತ್ತು 48(4)ರನ್ವಯ ಕ್ರಮ ಜರುಗಿಸುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43-ಎ(iii) ಮತ್ತು 48(4) ರಡಿ ಕ್ರಮ ವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟೀಸನ್ನು ದಿನಾಂಕ: 21.05.2019, 30.05.2019 ಮತ್ತು 17.06.2019 ರಂದು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಸದರಿಯವರು ಕಾರಣ ಕೇಳುವ ನೋಟೀಸಿಗೆ ಈ ಕೆಳಕಂಡಂತೆ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ಸದರಿ ಅಧ್ಯಕ್ಷರ ಮೇಲೆ ಸ್ವಚ್ಛ ಭಾರತ್ ಮಿಷನ್ ಅಡಿ ಅನುದಾನ ದುರ್ಬಳಕೆ ಮಾಡಿದಾರೆಂದು ಆರೋಪ ಹುಟ್ಟು ಸುಳ್ಳು ಸದರಿಯವರು ಅಕ್ಷರ ತಿಳಿಯಲಾದ ಮುಗ್ಧ ಮಾನಸುಳ್ಳ ಅನಕ್ಷರಸ್ಥಳಾಗಿದ್ದು, ತಮಗೆ ಬೇರೆ ಕಾರಣವನ್ನು ಹೇಳಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಮಲ್ಲಪ್ಪ ಜತ್ತಿ (ಗ್ರೇಡ್-2 ಕಾರ್ಯದರ್ಶಿ) ಶಿರೂರು ಗ್ರಾಮ ಪಂಚಾಯಿತಿ, ಇವರು ಬೇರೆ ಬೇರೆ ವಿಷಯವನ್ನು ಹೇಳಿ ತಾವು ಚೆಕ್‌ಗಳಿಗೆ ಸಹಿ ಮಾಡಿದ ಚೆಕ್‌ಗಳನ್ನು ತಂದು ಅನಕ್ಷರಸ್ಥಳಾದ ಇವರಿಗೆ ಬೇರೆ ಕಾರಣದ ನೆಪ ಹೇಳಿ ದುರುದ್ದೇಶದಿಂದ ಇವರ ವಿರುದ್ಧ ದ್ವೇಷ ಸಾಧಿಸಲು ಮಾಡಿದ ಕುತಂತ್ರವಾಗಿದ್ದು, ಇವರಿಗೆ ಜಾತಿ ನಿಂದನೆ ಮಾಡಿದಲ್ಲದೆ. ಇವರ ಅಧಿಕಾರವನ್ನು, ಆದ್ಯ ಕರ್ತವ್ಯವನ್ನು ನಿಭಾಯಿಸುವ ಹಾಗೂ ಸರ್ಕಾರದ ನಿಯಮವನ್ನು ಮೀರದಂತೆ ಆಡಳಿತವನ್ನು (ಕರ್ತವ್ಯವನ್ನು) ಮಾಡುವಂತೆ ಅಧಿಕಾರಿಗಳಾದ ಶ್ರೀ ಮಲ್ಲಪ್ಪ ಜತ್ತಿಯವರೇ ಈ ಒಂದು ಲೋಪದೋಷಕ್ಕೆ ಕಾರಣೀಕೃತರಾಗಿದ್ದಾರೆ. ಕಾರಣ ಈ ಒಂದು ಲೋಪವು ಇವರ ಗಮನಕ್ಕೆ ಬಂದ ತಕ್ಷಣ ಶ್ರೀ ಮಲ್ಲಪ್ಪ ಜತ್ತಿಯವರು, ಪುನ: ಹಣವನ್ನು ಗ್ರಾಮ ಪಂಚಾಯಿತಿ ಶಿರೂರು, ಖಾತೆಗೆ ಜಮಾ ಮಾಡಲು

ಸೂಚಿಸಿದ್ದೇನೆ. ಅದರಂತೆ ಶ್ರೀ ಮಲ್ಲಪ್ಪ ಜತ್ತಿಯವರು ಪಂಚಾಯಿತಿಯ ಖಾತೆಗೆ ಹಣವನ್ನು ತುಂಬಿರುತ್ತಾರೆ. ಇದರಲ್ಲಿ ಇವರಿಗೆ ಯಾವುದೇ ತಪ್ಪು ಇರುವುದಿಲ್ಲ ದಯಮಾಡಿ ಇವರ ಮನವಿಯನ್ನು ಸ್ವೀಕರಿಸಿ ನಿರ್ದೋಷಿಯಾದ ಇವರನ್ನು ಸದರಿ ಆರೋಪದಿಂದ ಕೈಬಿಡಬೇಕೆಂದು ಮತ್ತೊಮ್ಮೆ ಕೈ ಮುಗಿದು ಬೇಡಿಕೊಂಡಿರುತ್ತಾರೆ. ಈ ಮನವಿಯನ್ನು ಇವರಿಗೆ ಪರಿಚಯವಿದ್ದ ಸಹೋದರರಾದ ಶ್ರೀ ರಾಮಣ್ಣ ಹೆಚ್. ಚೌಡ್ಕಿ ಯವರು ಮುಂದೆ ತಿಳಿಸಿ ಹೇಳಿ ಬರೆಸಿಕೊಂಡಿ ಬಂದಿರುತ್ತೇನೆ. ಬರೆಸಿದ ಮನವಿಯನ್ನು ಶ್ರೀ ರಾಮಣ್ಣ ಹೆಚ್. ಚೌಡ್ಕಿ ಇವರ ಮುಂದೆ ಓದಿ ತಿಳಿಸಿದ ಮನವಿ ಪತ್ರ ಇದು ಆಗಿರುತ್ತದೆ. ಈ ಮನವಿಯನ್ನು ಸ್ವೀಕರಿಸಿ ಅನಕ್ಷರಸ್ಥಳಾದ ತಮ್ಮನ್ನು ಕ್ಷಮಿಸಿ ಕೈಬಿಡಬೇಕೆಂದು ವಿನಂತಿಸಿರುತ್ತಾರೆ.

<u>ವಿಚಾರಣಾ ಅಧಿಕಾರಿಗಳ ಅಂಶಗಳು:-</u>

- ಸದರಿ ಪ್ರಕರಣದಲ್ಲಿ ಶಿರೂರು ಗ್ರಾಮ ಪಂಚಾಯಿತಿಯಲ್ಲಿ ಸ್ವಚ್ಛ ಭಾರತ್ ಮಿಷನ್ ಯೋಜನೆಯ ಅನುಷ್ಠಾನ ಮಾರ್ಗಸೂಚಿ/ಸುತ್ತೋಲೆಗಳ ನಿಯಮಗಳನ್ನು ಮೀರಿ ಬೇರೆ ಉದ್ದೇಶಗಳಿಗಾಗಿ ರೂ.2,05,700/- ಗಳನ್ನು ರೂ.700/- ಹಣವನ್ನು ದುರ್ಬಳಕೆಯಾಗಿರುವುದರಿಂದ ಶಿರೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಹನುಮವ್ವ ಗಂಡ ದುರುಗಪ್ಪ ಮ್ಯಾಗಳಕೇರಿ (ಮ್ಯಾಗಳಮನಿ) ಸಾ: ಅರಕೆರೆ ಇವರ ಗ್ರಾಮ ಪಂಚಾಯಿತಿ ಸದಸ್ಯತ್ವ ರದ್ದುಪಡಿಸಬೇಕೆಂದು ಶ್ರೀ ಸಿದ್ದಪ್ಪ ಮತ್ತು ಪುಷ್ಪ ಹಾಗೂ ಇತರೆ ಗ್ರಾಮ ಪಂಚಾಯಿತಿ ಸದಸ್ಯರು ದೂರು ಸಲ್ಲಿಸಿರುವುದರಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕೊಪ್ಪಳ ಇವರ ದಿನಾಂಕ: 29-08-2017 ರ ಆದೇಶದನ್ವಯ ಸದರಿ ದೂರಿನ ಕುರಿತು ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ, ತಾಲ್ಲೂಕು ಪಂಚಾಯಿತಿ ಯಲಬುರ್ಗಾ ಇವರು ದಿನಾಂಕ: 09-09-2017 ರಂದು ಗ್ರಾಮ ಪಂಚಾಯಿತಿ ಶಿರೂರುರಿಗೆ ಹಾಜರಾಗಿ ತನಿಖೆ ಕೈಗೊಂಡು ದಿನಾಂಕ: 25-09-2017 ರಂದು ತನಿಖೆ ವರದಿ ಸಲ್ಲಿಸಿರುತ್ತಾರೆ.
- ಸಿಂಡಿಕೇಟ್ ಬ್ಯಾಂಕ್ ಶಾಖೆ, ಶಿರೂರು ಎಸ್.ಬಿ. ಖಾತೆ ನಂಬರ್ 18142200053260 ರಲ್ಲಿ ದಿನಾಂಕ: 17-02-2017 ರಿಂದ 17-04-2017 ರ ಅವಧಿಯಲ್ಲಿ ಒಟ್ಟು ರೂ.2,05,700/- ಗಳನ್ನು ಬೇರೆ ಬೇರೆ ಹೆಸರಿನಲ್ಲಿ ಡ್ರಾ ಮಾಡಿ ನಂತರ ಸದರಿ ಡ್ರಾ ಮಾಡಿದ ರೂ.2,05,700/- ಗಳನ್ನು ಸಿಂಡಿಕೇಟ್ ಬ್ಯಾಂಕ್ ಶಾಖೆ, ಶಿರೂರು ಎಸ್.ಬಿ. ಖಾತೆ ನಂಬರ್ 18142200053260 ಗೆ ಜಮಾ ಮಾಡಿರುವುದು ಸ್ಪಷ್ಟವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ಹಣ ಯಾಕೆ ಡ್ರಾ ಮಾಡಿ ಮರಳಿ ತುಂಬಿರುತ್ತೀರಿ ಇದು ತಪ್ಪು ಕ್ರಮವೆಂದು ಅಧ್ಯಕ್ಷರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶ್ರೀ ಮಲ್ಲಪ್ಪ ಜತ್ತಿ ಇವರನ್ನು ವಿಚಾರಣೆ ಮಾಡಿದಾಗ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಂಡದ ವಿಧ್ಯಾರ್ಥಿಗಳಿಗೆ 20% ವಿತರಿಸಬೇಕಾಗಿರುವುದರಿಂದ ಹಣ ಡ್ರಾ ಮಾಡಿ ವಿತರಣೆ ಮಾಡಿ ಕರವಸೂಲಿಯಾದ ನಂತರದಲ್ಲಿ ಡ್ರಾ ಮಾಡಿದ ಹಣವನ್ನು ಬ್ಯಾಂಕಿಗೆ ಜಮಾ ಮಾಡಿರುವುದದಾಗಿ ಹೇಳಿಕೆ ಕೊಟ್ಟಿರುತ್ತಾರೆ. ಹಣವನ್ನು ವಿಧ್ಯಾರ್ಥಿಗಳಿಗೆ ಕೊಡಬೇಕಾಗಿದ್ದರೆ ವಿಧ್ಯಾರ್ಥಿಗಳಿಗೆ ಹೆಸರಿಗೆ ಚೆಕ್ ಕೊಡಬೇಕಾಗಿತ್ತು ವಿಧ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಚೆಕ್ ಇಲ್ಲದ ಕಾರಣ ಸೆಲ್ಫ/ ಬಿಲ್ ಕಲೆಕ್ಟರಿಂದ ಹಣವನ್ನು ತರಿಸಿ ಬಡವಡೆ ರಿಜಿಸ್ಟರ್‌ನಲ್ಲಿ ವಿಧ್ಯಾರ್ಥಿಗಳಿಗೆ ಸಹಿ ಪಡೆದು ಹಣ ಪಾವತಿ ಮಾಡಿರುವುದಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶ್ರೀ ಮಲ್ಲಪ್ಪ ಜತ್ತಿ ಇವರು ಹೇಳಿಕೆ ಕೊಟ್ಟರು ಆದರೆ ಬಡವಡೆ ಮಾಡಿರುವ ರಿಜಿಸ್ಟರ್ ಪರಶೀಲನೆಗೆ ಲಭ್ಯವಿಲ್ಲದ ಕಾರಣ ಪರಿಶೀಲಿಸಲು ಸಾಧ್ಯವಾಗಿಲ್ಲವೆಂದು ವರದಿ ಸಲ್ಲಿಸಿರುತ್ತಾರೆ.

ಸದರಿ ಅಧಿಕಾರಿಗಳ ವರದಿಯು ಸಮಂಜಸವಾಗಿಲ್ಲವೆಂದು ದೂರುದಾರರ ಹೇಳಿಕೆ ಮೇರೆಗೆ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕೊಪ್ಪಳ ದಿನಾಂಕ:09.10.2017ರ ಆದೇಶದ ಅನ್ವಯ ಸದರಿ ವಿಷಯದ ಕುರಿತು ಪುನಃ ಸಹಾಯಕ ಲೆಕ್ಕಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಯಲಬುರಗ ಇವರು ತನಿಖೆ ಕೈಗೊಂಡು ದಿ:15.11.2017 ರಂದು ಈ ಕೆಳಗಿನಂತೆ ವರದಿ ಸಲ್ಲಿಸಿರುತ್ತಾರೆ.

- ಶ್ರೀ ಮಲ್ಲಿಕಾರ್ಜುನ ಶಿರೂರ ಗ್ರಾ.ಪಂ ಸದಸ್ಯ ಇವರು ದಿ:12.10.2017 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕೊಪ್ಪಳ ಇವರಿಗೆ ನೀಡಿರುವ ದೂರಿನಲ್ಲಿ ಸ್ವಚ್ಛ ಭಾರತ ಯೋಜನೆಯಡಿಯಲ್ಲಿ 2013-14ನೇ ಸಾಲಿನ ಎಸ್.ಸಿ ಎಸ್.ಟಿ ಫಲನುಭವಿಗಳ ವೈಯಕ್ತಿಕ ಖಾತೆ ಸಂಖ್ಯೆ-18142200053260 ಸಿಂಡಿಕೇಟ್ ಬ್ಯಾಂಕ್ ಶಿರೂರು ಇಲ್ಲಿಂದ ಗ್ರಾಮ ಪಂಚಾಯಿತಿ ಅಧ್ಯಕ್ಷರು ತಮ್ಮ ಸ್ವಂತ ಕುಟುಂಬದ ಸದಸ್ಯರುಗಳ ಹೆಸರುಗಳಲ್ಲಿ ಹಾಗೂ ಪಂಚಾಯಿತಿ ಸಿಬ್ಬಂದಿಗಳ ಹೆಸರುಗಳಲ್ಲಿನ ವಿವಿಧ ಚೆಕ್‌ಗಳನ್ನು ದಿ:02.02.2017, 03.02.2017, 04.02.2017, 09.02.2017, 23.02.2017, 03.03.2017, 04.03.2017, ಗಳಂದು ಹಣವನ್ನು ಕಾನೂನು ಬಾಹಿರವಾಗಿ ಡ್ರಾ ಮಾಡಿಕೊಂಡ ಬಗ್ಗೆ ದೂರಿನಲ್ಲಿ ತಿಳಿಸಿರುತ್ತಾರೆ. 2016-17ನೇ ಸಾಲಿನಲ್ಲಿ ಇಎಫ್‌ಎಂಎಸ್ ಪದ್ದತಿ ಚಾಲ್ತಿಯಲ್ಲಿದ್ದರೂ ಸಹಿತ 2013-14ನೇ ಸಲಿನ ಯೋಜನೆಯ ಹಣವನ್ನು ಯಾವ ಆಧಾರದ ಮೇಲೆ ಡ್ರಾ ಮಾಡಿರುತ್ತಾರೆ.
- ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ 20% ವಿತರಿಸಬೇಕಾಗಿದ್ದರಿಂದ ಹಣ ಡ್ರಾ ಮಾಡಿ ವಿತರಣೆ ಮಾಡಿರುವುದಾಗಿ ಶ್ರೀ ಮಲ್ಲಪ್ಪ ಜತ್ತಿ ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ತನಿಖಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಸ್ವಚ್ಛ ಭಾರತ ಮಿಷನ್ ಯೋಜನೆಯ ಮಾರ್ಗಸೂಚಿಯನ್ವಯ ಬೇರೆ ಉದ್ದೇಶಕ್ಕೆ ಬಳಸಲು ಅವಕಾಶ ಇರುವುದಿಲ್ಲ. ಇದರಿಂದ ಶ್ರೀ ಮಲ್ಲಪ್ಪ ಜತ್ತಿ ಹಿಂದಿನ ಪಂಚಾಯಿತಿ ಅಬಿವೃದ್ಧಿ ಅಧಿಕಾರಿ ಇವರು ಕರ್ತವ್ಯ ಲೋಪೆಸಗಿರುವುದು ಕಂಡು ಬರುತ್ತದೆಂದು ತಿಳಿಸಿರುತ್ತಾರೆ.
- ಶ್ರೀ ಮಲ್ಲಪ್ಪ ಜತ್ತಿ ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ದಿ:13.11.2017 ರಂದು ನಗದು ಪುಸ್ತಕ, ಶಿರೂರ ಗ್ರಾಮ ಪಂಚಾಯಿತಿಯ ಠರಾವು ಪುಸ್ತಕ ಮತ್ತು ಪೂರಕ ದಾಖಲೆಗಳನ್ನು ಸಲ್ಲಿಸುವುದಾಗಿ ಲಿಖಿತ ಹೇಳಿಕೆಯಲ್ಲಿ ತಿಳಿಸಿರುತ್ತಾರೆ ಆದರೆ ಇದುವರೆಗೂ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.
- ಶಿರೂರ ಗ್ರಾಮ ಪಂಚಾಯಿತಿಯಲ್ಲಿ ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕುಟುಂಬಗಳಿಗೆ ಬಿಡುಗಡೆಯಾಗಿರುವ ರೂ.6.00 ಲಕ್ಷ ಅನುದಾನದಲ್ಲಿ ಈ ಯೋಜನೆಗೆ ಹೊರತುಪಡಿಸಿ ಸರ್ಕಾರದ ಮಾರ್ಗಸೂಚಿ/ಸುತ್ತೋಲೆಯನ್ನು ಉಲ್ಲಂಘಿಸಿ ಬೇರೆ ಉದ್ದೇಶಕ್ಕಾಗಿ ರೂ.2,05,700/-ಗಳನ್ನು ಬೇರೆ ವ್ಯಕ್ತಿಗಳ ಹೆಸರಿನಲ್ಲಿ ಚೆಕ್ ಮೂಲಕ ಹಣ ಡ್ರಾ ಮಾಡಿ ಬಳಕೆ ಮಾಡಿದ್ದು, ತದನಂತರದಲ್ಲಿ ಸದರಿ ಹಣವನ್ನು ಮರಳಿ ಎಸ್.ಬಿ.ಎಂ. ಖಾತೆಗೆ ಜಮಾ ಮಾಡಿದ್ದರೂ ಸಹ ಡ್ರಾ ಮಾಡಿರುವ ಸದರಿ ಹಣವನ್ನು ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿರುವ ಕುರಿತು ಸಂಬಂಧಪಟ್ಟ ದಾಖಲಾತಿಗಳನ್ನು ಲಭ್ಯವಿರುವ ಕುರಿತು ಸಂಶಯಾಸ್ಪದವಾಗಿರುವುದರಿಂದ ಈ ಡ್ರಾ ಮಾಡಿ ಜಮಾ ಮಾಡಿದ ಅವಧಿಯಲ್ಲಿ ತಾತ್ಕಾಲಿಕವಾದ ಅವಧಿಯಲ್ಲಿ ರೂ.2,05,700/-ಗಳನ್ನು ಶಿರೂರ ಗ್ರಾಮ ಪಂಚಾಯಿತಿಯ ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯೊಂದಿಗೆ ಶಾಮೀಲಾಗಿ ಶ್ರೀಮತಿ ಹನುಮವ್ವ ಗಂಡ ದುರುಗಪ್ಪ ಮ್ಯಾಗಳಕೇರಿ (ಮ್ಯಾಗಳಮನಿ) ಇವರು ಸರ್ಕಾರದ ಹಣ ದುರುಪಯೋಗಪಡಿಸಿಕೊಂಡು ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಎಂದು ವರದಿ ಮಾಡಿರುತ್ತಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(1)(V) ರನ್ವಯ ಪಂಚಾಯತ್‌ನ ಯಾವುದೇ ಬೇರೆ ರೀತಿಯ ಕಾಮಗಾರಿಯನ್ನು ಕಾರ್ಯಗತಗೊಳಿಸುವಾಗ ಕರಾರು ಸಂಬಂಧ ಅಥವಾ ಕಾಮಗಾರಿಗಳಿಗೆ ಸಂಬಂಧಿಸಿದ ಯಾವುದೇ ವ್ಯವಹಾರದಲ್ಲಿ ಕುಟುಂಬದ ಹತ್ತಿರದ ಸಂಬಂಧಿಕರಾಗಿರುವ ಯಾವೊಬ್ಬ ವ್ಯಕ್ತಿಯೊಂದಿಗೆ ಪ್ರತ್ಯಕ್ಷವಾಗಿ ತೊಡಗಿಕೊಂಡಿರುವುದು ಕಂಡು ಬಂದರೆ ಅಥವಾ ಪಾಲುದಾರರದಂತೆ, ನೌಕರನಂತೆ ಅಥವಾ ಅಂಥ ಅನ್ಯಥ ಸಂಘ ಸಂಸ್ಥೆ ಮಂಡಲಿಯಲ್ಲಿ ಸದಸ್ಯನಂತೆ ಸಹಭಾಗಿಯಾಗಿರುವನೆಂದು, ಕಂಡು ಬಂದರೆ ಅವನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ನಂತರ ಮತ್ತು ಅಗತ್ಯವೆಂದು ತಾನು ಭಾವಿಸಿದಂಥ ವಿಚಾರಣೆ ಮಾಡಿದ ನಂತರ ತೆಗೆದು ಹಾಕುವುದು ಸೂಕ್ತವೆಂದು ಭಾವಿಸಿದ್ದಾರೆ ಆ ಸದಸ್ಯನನ್ನು ಆತನ ಸದಸ್ಯತ್ವದಿಂದ ತೆಗೆದು ಹಾಕಬಹುದು ಎಂದು ತಿಳಿಸಿದೆ.

ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕುಟುಂಬಗಳಿಗೆ ಬಿಡುಗಡೆಯಾಗಿರುವ ರೂ.6.00 ಲಕ್ಷ ಅನುದಾನದಲ್ಲಿ ಈ ಯೋಜನೆಗೆ ಹೊರತುಪಡಿಸಿ ಸರ್ಕಾರದ ಮಾರ್ಗಸೂಚಿ/ಸುತ್ತೋಲೆಯನ್ನು ಉಲ್ಲಂಘಿಸಿ ಬೇರೆ ಉದ್ದೇಶಕ್ಕಾಗಿ ರೂ.2,05,700/-ಗಳನ್ನು ಬೇರೆ ವ್ಯಕ್ತಿಗಳ ಹೆಸರಿನಲ್ಲಿ ಚೆಕ್ ಮೂಲಕ ಹಣ ಡ್ರಾ ಮಾಡಿ ಬಳಕೆ ಮಾಡಿದ್ದು, ತದನಂತರದಲ್ಲಿ ಸದರಿ ಹಣವನ್ನು ಮರಳಿ ಎಸ್.ಬಿ.ಎಂ. ಖಾತೆಗೆ ಜಮಾ ಮಾಡಿದ್ದರೂ ಸಹ ಡ್ರಾ ಮಾಡಿರುವ

ಸದರಿ ಹಣವನ್ನು ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿರುವ ಆರೋಪವು ಸಾಬೀತಾಗಿರುವುದರಿಂದ ಸರ್ಕಾರವು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಶ್ರೀಮತಿ ಹನುಮವ್ವ ಗಂಡ ದುರುಗಪ್ಪ ಮ್ಯಾಗಳಕೇರಿ (ಮ್ಯಾಗಳಮನಿ) ಸಾ: ಅರಕೇರ, ಶಿರೂರು ಗ್ರಾಮ ಪಂಚಾಯಿತಿ ರವರನ್ನು ಅಧ್ಯಕ್ಷ ಸ್ಥಾನ ಮತ್ತು ಸದಸ್ಯ ಸ್ಥಾನದಿಂದ ತೆಗೆದು ಹಾಕಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/738/ಗ್ರಾಪಂಅ/2019</u>**
**<u>ಬೆಂಗಳೂರು, ದಿನಾಂಕ: 18-10-2019.</u>**

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಆಪಾದಿತ ಅಧ್ಯಕ್ಷರಾದ ಶ್ರೀಮತಿ ಹನುಮವ್ವ ಗಂಡ ದುರುಗಪ್ಪ ಮ್ಯಾಗಳಕೇರಿ (ಮ್ಯಾಗಳಮನಿ) ಸಾ: ಅರಕೇರ, ಶಿರೂರು ಗ್ರಾಮ ಪಂಚಾಯಿತಿ, ಯಲಬುರ್ಗಾ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರು ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕುಟುಂಬಗಳಿಗೆ ಬಿಡುಗಡೆಯಾಗಿರುವ ರೂ.6.00 ಲಕ್ಷ ಅನುದಾನದಲ್ಲಿ ಈ ಯೋಜನೆಗೆ ಹೊರತುಪಡಿಸಿ ಸರ್ಕಾರದ ಮಾರ್ಗಸೂಚಿ/ಸುತ್ತೋಲೆಯನ್ನು ಉಲ್ಲಂಘಿಸಿ ಬೇರೆ ಉದ್ದೇಶಕ್ಕಾಗಿ ರೂ.2,05,700/-ಗಳನ್ನು ಬೇರೆ ವ್ಯಕ್ತಿಗಳ ಹೆಸರಿನಲ್ಲಿ ಚೆಕ್ ಮೂಲಕ ಹಣ ಡ್ರಾ ಮಾಡಿ ಬಳಕೆ ಮಾಡಿದ್ದು, ತದನಂತರದಲ್ಲಿ ಸದರಿ ಹಣವನ್ನು ಮರಳಿ ಎಸ್.ಬಿ.ಎಂ. ಖಾತೆಗೆ ಜಮಾ ಮಾಡಿದ್ದರೂ ಸಹ ಡ್ರಾ ಮಾಡಿರುವ ಸದರಿ ಹಣವನ್ನು ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿರುವ ಆರೋಪವು ಸಾಬೀತಾಗಿರುತ್ತದೆ. ಆದ್ದರಿಂದ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಶ್ರೀಮತಿ ಹನುಮವ್ವ ಗಂಡ ದುರುಗಪ್ಪ ಮ್ಯಾಗಳಕೇರಿ (ಮ್ಯಾಗಳಮನಿ) ಸಾ: ಅರಕೇರ, ಶಿರೂರು ಗ್ರಾಮ ಪಂಚಾಯಿತಿ ರವರನ್ನು ಶಿರೂರು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಸ್ಥಾನ ಮತ್ತು ಸದಸ್ಯ ಸ್ಥಾನದಿಂದ ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Narayan DG.
(ಡಿ.ಜಿ. ನಾರಾಯಣ) 18/10/19
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ.)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಗೆ:</u>

1. ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಕೊಪ್ಪಳ ಜಿಲ್ಲೆ.
3. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಯಲಬುರ್ಗಾ, ಕೊಪ್ಪಳ ಜಿಲ್ಲೆ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶಿರೂರು ಗ್ರಾಮ ಪಂಚಾಯಿತಿ, ಯಲಬುರ್ಗಾ ತಾಲ್ಲೂಕು, ಕೊಪ್ಪಳ ಜಿಲ್ಲೆ.
5. ಶ್ರೀಮತಿ ಹನುಮವ್ವ ಗಂಡ ದುರುಗಪ್ಪ ಮ್ಯಾಗಳಕೇರಿ (ಮ್ಯಾಗಳಮನಿ) ಸಾ: ಅರಕೇರ, ಶಿರೂರು ಗ್ರಾಮ ಪಂಚಾಯಿತಿ, ಯಲಬುರ್ಗಾ ತಾಲ್ಲೂಕು, ಕೊಪ್ಪಳ ಜಿಲ್ಲೆ.
6. ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ನಿರ್ದೇಶಕರು(ಪಂ.ರಾಜ್-1) ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.